ತಾರೀಖು 29ನೇ ಜುಲೈ 1896.

ನಂ. 1003.—ಫೈ. 75, ಮೈಸೂರ ಸರ್ವಿಸ್ ರೆಗ್ಯುಲೇಷ್ಯನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಸ್ಟೇಟ್ ಹುಜೂರ್ ಟ್ರೆಜರಿಯ ಟ್ರೆಜರರ್ ಮಿಸ್ಟರ್ ಟಿ. ರಾಯುಲುಚಟ್ಟಿಯವರಿಗೆ, ಮೂಹೆ ಮಜಕೂರ್ 29ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹತ್ತು ದಿನಗಳ ಕ್ಯಾಜುಯೆಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷ್ಯನ್.

ನಂ. 162. ತಾರೀಖು 30ನೇ ಜುಲೈ 1896, ಬೆಂಗಳೂರು.

ಮೈಸೂರ್ ಷಹರಿನಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಪಂಚಕಗವಿಮಠ—ಜಪದಕಟ್ಟೆಮಠ—ದೀನನಾಥಲಾಲಾ ಧರ್ಮಶಾಲಾ ಈ 3ಕ್ಕೂ ಈ ಕೆಳಗೆ ನಮೂದಿಸುವವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸಿಯಿದೆ.

1. ಅಡ್ವೊಕೇಟ್ ಯಂ. ಎ. ಕೃಷ್ಣಯ್ಯಂಗಾರ್ ಬಿ. ಯೆ. ಯವರು.
2. ಅಂಬಳೆ ಅಣ್ಣಯ್ಯಪಂಡಿತರು.
3. ಪೆರ್ಷ್ಯ ಅಮಲ್ದಾರ್ ನಾರಾಯಣಸ್ವಾಮಿರಾಯರು.
4. ಧರ್ಮಾಧಿಕಾರಿ ಸುಂದರಶಾಸ್ತ್ರಿಗಳವರು.
5. ಪಂಡಿತ ರತ್ನಂಕಸೂರಿ ರಂಗಾಚಾರ್ಯರು.

ಏ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ.